3ನೇ ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಚನ್ನರಾಯಪಟ್ಟಣ.

**ಸಿ.ಸಿ.ಃ 778/2013**

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ | ಆನಂದ | ಸಿಡಬ್ಲ್ಯೂ - 2 |
| ತಂದೆ ಹೆಸರು | ಃ | ರಾಮಯ್ಯ | ಪಿ ಡಬ್ಲ್ಯೂ - 1 |
| ವಯಸ್ಸು | ಃ | 46 ವರ್ಷ | |
| ಉದ್ಯೋಗ | ಃ | ವ್ಯವಸಾಯ | ಪ್ರಮಾಣ ವಚನ ಬೋಧಿಸಲಾಯಿತು |
| ವಾಸ | ಃ | ಬೆಳಗಿಹಳ್ಳಿ | ದಿನಾಂಕಃ 07-11-2019 |

ಮುಖ್ಯ ವಿಚಾರಣೆ ಃ- ನುರಿತ ಎ.ಪಿ.ಪಿ. ಯವರಿಂದಃ

ಸಾಕ್ಷಿಗೆ ಸ್ಥಳ ಮತ್ತು ಅಮಾನತ್ತು ಮಹಜರ್ ನ್ನು ತೋರಿಸಿದ್ದು, ತನ್ನ ಸಹಿಯನ್ನು ಸಾಕ್ಷಿ ಗುರುತಿಸಿರುತ್ತಾರೆ. ಮಹಜರ್ ನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ದಿಃ 10-10-2010 ರಂದು ಬೆಳಗಿಹಳ್ಳಿ ಗ್ರಾಮದ ಲಕ್ಷ್ಮಿ ನರಸಿಂಹಸ್ವಾಮಿ ದೇವಸ್ಥಾನದ ಬಳಿ, ದೇವಸ್ಥಾನದಲ್ಲಿ ಕಳ್ಳತನವಾದ ಬಗ್ಗೆ ಪೊಲೀಸರು ಮಹಜರ್ ಮಾಡಲು ಬಂದ ಸಂದರ್ಭದಲ್ಲಿ ಸದರಿ ಸಹಿಯನ್ನು ಮಾಡಿರುತ್ತೇನೆ. ಚಾಸಾ-1 ರವರು ಸ್ಥಳ ತೋರಿಸಿದ ಮೇರೆಗೆ ಪೊಲೀಸರು ಬೀಗವನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ಮಹಜರ್ ನ್ನು ಮಧ್ಯಾಹ್ನ 02-00 ರಿಂದ 03-00 ಗಂಟೆಯವರೆಗೆ ಮಹಜರ್ ಜರುಗಿಸಿರುತ್ತಾರೆ. ನಿಪಿ-1 ರಲ್ಲಿ ನನ್ನೊಂದಿಗೆ ಚಾಸಾ-1 ಮತ್ತು 3 ರವರು ಸಹಿ ಮಾಡಿರುತ್ತಾರೆ.

*ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗೆ ಕೋರಿಕೆಯ ಮೇರೆಗೆ ಮುಂದೂಡಲಾಯಿತು.*

ಮುಕ್ತ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.

ಓ.ಹೇ.ಸ.ಇ.ಎ.ಒ.,

3ನೇ ಅಧಿಕ ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ